| | | |
|---|---|---|
| KNOWLEDGE FOR POSTERITY SDUAHER | **SRI DEVARAJ URS ACADEMY OF HIGHER EDUCATION & RESEARCH**<br>**SRI DEVARAJ URS MEDICAL COLLEGE**<br>**Tamaka, Kolar**<br>**UNIVERSITY LIBRARY & LEARNING RESOURCE CENTRE** | SDUMC ESTD.1986 सर्वे जना: स्वास्थ्य भवन्तु |

## Online Newspaper Clipping Service

**Dtd- Thursday, 18th September 2025**



**ಕೋಲಾರಪತ್ರಿಕೆ**

# ನರ್ಸ್‌ಗಳಿಗೆ ಶೌರ್ಯ, ಜೋಷ್ ಸ್ಪರ್ಧೆ



ಕೋಲಾರ, ಸೆ ೧೭- ಸ್ಪರ್ಧೆಗಳು ನಾಯಕತ್ವ ಗುಣ ಬೆಳೆಸುವ ಜೊತೆಗೆ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ. ಇದನ್ನು ಸದ್ಬಳಕೆ ಮಾಡಿಕೊಂಡು ನರ್ಸಿಂಗ್ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿ ಗೆದ್ದು ಬರಬೇಕೆಂದು ಅಖಿಲ ಭಾರತ ತರಬೇತಿ ಪಡೆದ ನರ್ಸ್‌ಗಳ ಸಂಘದ ರಾಜ್ಯ ಉಪಾಧ್ಯಕ್ಷೆ ಲರಿಸ್ಸಾ ಮಾರ್ಥಾ ಸ್ಯಾಮ್ಸ್ ಹೇಳಿದರು.

ನಗರದ ಜಾಲಪ್ಪ ಶಿಕ್ಷಣ ಸಂಸ್ಥೆಯ ಬೆಳ್ಳಿ ಭವನದ ಸಭಾಂಗಣದಲ್ಲಿ ತರಬೇತಿ ಪಡೆದ ನರ್ಸ್‌ಗಳ ಸಂಘ ಹಾಗೂ ಅರಸು ನರ್ಸಿಂಗ್ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ ನರ್ಸಿಂಗ್ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕ್ರೀಡಾ ಸಾಂಸ್ಕೃತಿಕ ಶೌರ್ಯ ಮತ್ತು ಜೋಷ್ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಅಧ್ಯಕ್ಷತೆ ವಹಿಸಿದ್ದ ದೇವರಾಜಅರಸು ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ಉಪಾಧ್ಯಕ್ಷ ಜೆ.ರಾಜೇಂದ್ರ ಮಾತನಾಡಿ ಸಂಸ್ಥೆಯು ಕಲಿಕೆ ಮತ್ತು ಸೇವೆಗೆ ಆದ್ಯತೆ ನೀಡುತ್ತಿದೆ. ೧೫೦೦ ಹಾಸಿಗೆಗಳ ಆಸ್ಪತ್ರೆಯು ನರ್ಸ್‌ಗಳ ಕಲಿಕೆಗೆ ಹೆಚ್ಚಿನ ಅವಕಾಶ ಕಲ್ಪಿಸಿದೆ. ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿ ದೃಷ್ಟಿಕೋನದಲ್ಲಿ ಯೋಗ, ಆಯುರ್ವೇದ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆಯೆಂದರು.

ಸಂಸ್ಥೆಯ ಉಪ ಕುಲಪತಿ ಡಾ|| ಬಿ.ವೆಂಗಮ್ಮ ಮಾತನಾಡಿ, ನರ್ಸ್‌ಗಳ ವೃತ್ತಿ ಒತ್ತಡ ಕಡಮೆ ಮಾಡಲು ಈ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿಯಾಗಲಿದೆ, ವ್ಯಕ್ತಿತ್ವ ವಿಕಸನದ ಜೊತೆಗೆ ಬೌದ್ಧಿಕ ವಿಕಸನಕ್ಕೂ, ವೃತ್ತಿ ಗೌರವ ಘನತೆ ಹೆಚ್ಚಿಸಿಕೊಳ್ಳಲು ಸ್ಪರ್ಧೆಗಳು ಪ್ರಯೋಜನಕಾರಿಯಾಗಲಿದೆ ಎಂದರು.

ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಿ.ವಿ.ಎಲ್.ಎನ್. ಪ್ರಸಾದ್ ಮಾತನಾಡಿ ವೃತ್ತಿಯಲ್ಲಿ ಧೈರ್ಯ ಮತ್ತು ಚೈತನ್ಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಈ ಸ್ಪರ್ಧೆಗಳಿಗೆ ಶೌರ್ಯ ಮತ್ತು ಜೋಷ್ ಎಂಬ ಹೆಸರಿಡಲಾಗಿದೆ. ಸ್ಪರ್ಧೆಗಳು ಪರಸ್ಪರ ಸಹಕಾರ ಮನೋಭಾವ, ಸಂಘಟನೆ ಹಾಗೂ ಕ್ರಿಯಾಶೀಲತೆಯನ್ನು ಹೆಚ್ಚಿಸಲಿ ಎಂದರು.

ಸಂಸ್ಥೆಯ ಕಾರ್ಯದರ್ಶಿ ಕೆ.ಜಿ.ಹನುಮಂತರಾಜು, ರಿಜಿಸ್ಟ್ರಾರ್ ಡಾ|| ಸಿ.ಮುನಿನಾರಾಯಣ, ರಾಜ್ಯ ನರ್ಸ್‌ಗಳ ಸಂಘದ ಸಲಹೆಗಾರ್ತಿ ಡಾ|| ಎಲ್.ದಬಾಷಿಣಿ ದೇವಿ, ಅರಸು ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ||ವಿಜಯಲಕ್ಷ್ಮಿ, ಉಪ ಪ್ರಾಂಶುಪಾಲೆ ಲಾವಣ್ಯ ಸುಭಾಷಿನಿ, ಜೈರಾಕಿನಿ ಅರುಣ, ವೀಣಾ, ರಮ್ಯ ಉಪಸ್ಥಿತರಿದ್ದರು.

ಸ್ನೇಹಾ ಎಲಿಜಬೆತ್ ತಂಡದಿಂದ ಪ್ರಾರ್ಥನೆ, ನಂದಿನಿರಿಂದ ಸ್ವಾಗತ, ನರ್ಸಿಂಗ್ ವಿದ್ಯಾರ್ಥಿಗಳಾದ ದಿವ್ಯ, ಹರ್ಷಿತಾರಿಂದ ನಿರೂಪಣೆ ಮತ್ತು ಜಿ.ಸ್ವಾತಿರಿಂದ ವಂದನೆಗಳಾಯಿತು.